# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 729
ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 12.03.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಗೋಮಾಳ ಜಾಗವು ಲಭ್ಯವಿದೆ: (ಜಿಲ್ಲಾವಾರು ವಿಸ್ತೀರ್ಣದೊಂದಿಗೆ ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 1597262-35 ಎಕರೆ/ಗುಂಟೆ ಗೋಮಾಳ ಲಭ್ಯವಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಗೋಮಾಳ ಸ್ಥಳವನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗುತ್ತದೆ; | ಕರ್ನಾಟಕ ಭೂಕಂದಾಯ ನಿಯಮಗಳು-1966 ರ ನಿಯಮ-97 ರಂತೆ ಪ್ರತಿ 100 ಜಾನುವಾರುಗಳಿಗೆ ಹನ್ನೆರಡು ಹೆಕ್ಟೇರುಗಳಂತೆ ಪ್ರತಿಯೊಂದು ಗ್ರಾಮದ ಜಾನುವಾರುಗಳಿಗೂ ಸರ್ಕಾರಿ ಭೂಮಿಯನ್ನು ಉಚಿತ ಗೋಮಾಳವಾಗಿ ಇಡತಕ್ಕದ್ದಾಗಿದೆ.<br>ಅದರಂತೆ, ಗೋಮಾಳ ಜಮೀನನ್ನು ಜಾನುವಾರುಗಳಿಗೆ ಮೇಯಲು ಬಳಸಲಾಗುತ್ತದೆ.<br>ಉಳಿದಂತೆ ನಿಯಮ-97(4)ರಂತೆ ಸಾರ್ವಜನಿಕ ಉದ್ದೇಶ ಗಳಿಗೆ/ಸರ್ಕಾರಿ ಉದ್ದೇಶ ಗಳಿಗೆ ಹಾಗೂ ಕರ್ನಾಟಕ ಭೂಕಂದಾಯ ನಿಯಮಗಳು-1966 ರ ಅಧ್ಯಾಯ XIII-ಎ ಮೇರೆಗೆ ಅನಧಿಕೃತ ಸಾಗುವಳಿಯ ಸಕ್ರಮಗೊಳಿಸುವಿಕೆ ಉದ್ದೇಶಕ್ಕಾಗಿ ಬಳಸಲಾಗುತ್ತದೆ. |
| ಇ) | ಗೋಮಾಳ ಸ್ಥಳವನ್ನು ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಇರುವ ನಿಯಮಗಳೇನು: ಯಾವ ಯಾವ ಉದ್ದೇಶಗಳಿಗೆ ಗೋಮಾಳ ಜಾಗವನ್ನು ಮಂಜೂರು ಮಾಡಲಾಗುವುದು; (ವಿವರ ನೀಡುವುದು) | ಗೋಮಾಳ ಸ್ಥಳವನ್ನು ಖಾಸಗಿ ಸಂಘ-ಸಂಸ್ಥೆಗಳಿಗೆ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಕರ್ನಾಟಕ ಭೂಮಂಜೂರಾತಿ ನಿಯಮಗಳು-1969 ರ ನಿಯಮ-27 ರಂತೆ ಈ ಹಿಂದಿನ ನಿಯಮಗಳಲ್ಲಿ ಏನೇ ಇದ್ದರೂ ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಡಿವಿಜನಲ್ ಕಮೀಷನರ್ ಅಥವಾ ಡೆಪ್ಯೂಟಿ ಕಮೀಷನರ ಶಿಫಾರಸ್ಸಿನ ಮೇಲೆ ಯಾವುದೇ ಪ್ರಕರಣದ ಅಥವಾ ಪ್ರಕರಣಗಳ ವರ್ಗಗಳ ಸಂದರ್ಭದಲ್ಲಿ ಈ ನಿಯಮಗಳ ಯಾವುದೇ ಉಪಬಂಧಗಳನ್ನು ಸಡಿಲಗೊಳಿಸುವುದು ನ್ಯಾಯವೆಂದು ಮತ್ತು ಯುಕ್ತವೆಂದು ಅಭಿಪ್ರಾಯಪಟ್ಟರೆ ಅದು, ಅಂಥ ಸಡಿಲಿಕೆಗೆ ಕಾರಣಗಳನ್ನು ಅಭಿಲೇಖಿಸಿ ಆದೇಶ ಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅಂಥ ಸಡಿಲಿಕೆಗೆ ಆದೇಶ ಮೂಲಕ ನಿರ್ದೇಶಿಸಬಹುದು ಮತ್ತು ಅನಂತರ ಅಂಥ ನಿರ್ದೇಶನಕ್ಕನುಸಾರವಾಗಿ ಅಂಥ ಪ್ರಕರಣದಲ್ಲಿ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ಭೂಮಿಯನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.<br><br>ಮುಂದುವರೆದು, ಕರ್ನಾಟಕ ಭೂಮಂಜೂರಾತಿ ನಿಯಮಗಳು-1969 ರ ನಿಯಮ-22ಎ(1) ರಡಿ ದರವನ್ನು ವಿಧಿಸಿ ಕೈಗಾರಿಕೆ, ಶಿಕ್ಷಣ, ಕಲ್ಯಾಣ ಚಟುವಟಿಕೆಗಳು, ಧಾರ್ಮಿಕ ಉದ್ದೇಶ ಹಾಗೂ ಬೇಸಾಯ ಉದ್ದೇಶಗಳಿಗೆ ಜಮೀನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ | | | |
|---|---|---|---|---|---|
| ಈ) | ಕಳೆದ 2 ವರ್ಷಗಳಲ್ಲಿ ಎಷ್ಟು ಸಂಘ ಸಂಸ್ಥೆಗಳಿಗೆ ಗೋಮಾಳ ಜಾಗವನ್ನು ಮಂಜೂರು ಮಾಡಲಾಗಿದೆ: ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಸಂಘ-ಸಂಸ್ಥೆಗಳಿಗೆ ಮಂಜೂರಾಗಿರುವ ಗೋಮಾಳ ಜಮೀನುಗಳ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ. | | | |
| | | **ಜಿಲ್ಲೆ** | **ತಾಲ್ಲೂಕು, ಗ್ರಾಮ, ಸ.ನಂ. ವಿಸ್ತೀರ್ಣ (ಎಕರೆ/ಗುಂಟೆ)** | **ಸಂಘ ಸಂಸ್ಥೆಯ ಹೆಸರು** | **ಉದ್ದೇಶ** |
| | | ಚಿಕ್ಕಮಗಳೂರು | ಮೂಡಿಗೆರೆ ತಾಲ್ಲೂಕಿನ ಮಾವಿನಕೆರೆ ಗ್ರಾಮದ ಸ.ನಂ.434 ರಲ್ಲಿ 20 ಗುಂಟೆ ಜಮೀನು | ಬ್ರಹ್ಮಶ್ರೀ ನಾರಾಯಣ ಗುರು ಬಿಲ್ಲವ ಸಮಾಜ ಸೇವಾ ಸಂಘ, ಮಾವಿನಕೆರೆ, ಚಿಕ್ಕಮಗಳೂರು | ಸಮುದಾಯ ಭವನ ನಿರ್ಮಾಣಕ್ಕಾಗಿ |
| | | ರಾಮನಗರ | ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಜಿಗೇನಹಳ್ಳಿ ಗ್ರಾಮ ಸ.ನಂ. 92ರಲ್ಲಿ 05 ಗುಂಟೆ ಜಮೀನು | ರಾಮನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ರಾಮನಗರ. | ರಾಮನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ |
| | | ರಾಯಚೂರು | ರಾಯಚೂರು ತಾಲ್ಲೂಕು, ಯರ್ಮಾಸ್ ಗ್ರಾಮ, ಸ.ನಂ. 55/*/1ಅ, 14 ಗುಂಟೆ | ಕರ್ನಾಟಕ ಪ್ರದೇಶ ಕುರುಬರ ಸಂಘ, ಕನಕದಾಸ ವೃತ್ತ, ಗಾಂಧಿನಗರ, ಬೆಂಗಳೂರು | ವಸತಿ ನಿಲಯ |
| | | ಹಾವೇರಿ | ಶಿಗ್ಗಾಂವ ತಾಲ್ಲೂಕು, ಗುಡ್ಡದಚನ್ನಾಪುರ ಗ್ರಾಮದ ರಿಸನಂ. 84 ರಲ್ಲಿ 2-00 ಎಕರೆ | ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಸೇವಾ ಸಮಿತಿ (ರಿ), ದೇವಗಿರಿ | ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಹೊರಗುಡಿಗೆ |
| | | ವಿಜಯಪುರ | ತಿಕೋಟಾ ತಾಲ್ಲೂಕು, ನವರಸಪುರ ಗ್ರಾಮ ರಿ.ಸ.ನಂ. 62/*/* 05-00 ಎಕರೆ ಗಾಯರಾಣ | ಶ್ರೀ ಸಿದ್ದಲಿಂಗೇಶ್ವರ ವಿದ್ಯಾ ಅಭಿವೃದ್ಧಿ ಟ್ರಸ್ಟ, ಹಿರೇಮಠ, ವಿಜಯಪುರ | ಶೈಕ್ಷಣಿಕ |
| | | | ದೇವರಹಿಪ್ಪರಗಿ ತಾಲ್ಲೂಕು, ದೇವರ ಹಿಪ್ಪರಗಿ ರಿ.ಸ.ನಂ. 222ರಲ್ಲಿ 04-00 ಎಕರೆ ಗಾಯರಾಣ. | ಶ್ರೀ ಕರಿಸಿದ್ದೇಶ್ವರ ದೇವಸ್ಥಾನ ಸೇವಾ ಸಮಿತಿ. | ಶೈಕ್ಷಣಿಕ |
| | | | ವಿಜಯಪುರ ತಾಲ್ಲೂಕು, ಭೂತನಾಳ ಗ್ರಾಮದ ರಿ.ಸನಂ. 162/*/* ರಲ್ಲಿ 21-08 ಎಕರೆ/ಗುಂಟೆ ಗಾಯರಾಣ. | ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು | ಶೈಕ್ಷಣಿಕ |

ಸಂಖ್ಯೆ: ಆರ್‌ಡಿ 37ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ಅನುಬಂಧ-1 | | | |
|---|---|---|---|
| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ವಿಸ್ತೀರ್ಣ | |
| | | ಎಕರೆ | ಗುಂಟೆ |
| 1 | ಬೆಂಗಳೂರು ನಗರ ಜಿಲ್ಲೆ | 174 | 25 |
| 2 | ಬೆಂಗಳೂರು ಗ್ರಾಮಾಂತರ | 18455 | 29 |
| 3 | ಚಿಕ್ಕಬಳ್ಳಾಪುರ | 112194 | 1 |
| 4 | ಚಿತ್ರದುರ್ಗ | 148481 | 8 |
| 5 | ದಾವಣಗೆರೆ | 46744 | 16 |
| 6 | ಕೋಲಾರ | 88695 | 7 |
| 7 | ರಾಮನಗರ | 93220 | 3 |
| 8 | ಶಿವಮೊಗ್ಗ | 312627 | 31 |
| 9 | ತುಮಕೂರು | 116985 | 35 |
| 10 | ಚಾಮರಾಜನಗರ | 18992 | 23 |
| 11 | ಚಿಕ್ಕಮಗಳೂರು | 130893 | 2 |
| 12 | ದಕ್ಷಿಣ ಕನ್ನಡ | 4363 | 38 |
| 13 | ಹಾಸನ | 37525 | 22 |
| 14 | ಕೊಡಗು | 242 | 35 |
| 15 | ಮಂಡ್ಯ | 109558 | 23 |
| 16 | ಮೈಸೂರು | 52216 | 15 |
| 17 | ಉಡುಪಿ | 3616 | 21 |
| 18 | ಬಳ್ಳಾರಿ | 0 | 0 |
| 19 | ಬೀದರ್ | 25412 | 10 |
| 20 | ಕಲಬುರಗಿ | 90763 | 9 |
| 21 | ಕೊಪ್ಪಳ | 21396 | 28 |
| 22 | ರಾಯಚೂರು | 35571 | 29 |
| 23 | ಯಾದಗಿರಿ | 31230 | 20 |
| 24 | ವಿಜಯನಗರ | 196 | 15 |
| 25 | ಬಾಗಲಕೋಟೆ | 5718 | 37 |
| 26 | ಬೆಳಗಾವಿ | 56227 | 18 |
| 27 | ವಿಜಯಪುರ | 20105 | 27 |
| 28 | ಧಾರವಾಡ | 3586 | 17 |
| 29 | ಗದಗ | 1704 | 29 |
| 30 | ಹಾವೇರಿ | 8013 | 32 |
| 31 | ಉತ್ತರ ಕನ್ನಡ | 2346 | 30 |
| | **ಒಟ್ಟು** | **1597262** | **35** |